ಶ್ರೀ ವಸಂತ ಬಂಗೇರ: ಅರಣ್ಯ ಇಲಾಖೆಗೆ ಸೇರಿರುವಂತಹ ಜಾಗವನ್ನು ತೆಗೆದುಕೊಳ್ಳಬೇಕು ನೀವು ಅರಣ್ಯ ಜಾಗವನ್ನು ಬಿಡಬೇಡಿ.

ಅಧ್ಯಕ್ಷರು: ಎಲ್ಲಾ ಕಡೆಯಲ್ಲಿಯೂ ಇದೇ ಸಮಸ್ಯೆಯಾಗಿದೆ.

ಶ್ರೀ ವಸಂತ ಬಂಗೇರ: ನೀವು ಅರಣ್ಯ ಜಾಗದ ಬಗ್ಗೆ ಜಂಟಿ ಸರ್ವೆಯನ್ನು ಮಾಡಿ ಆ ಮೂಲಕ ನಿಮ್ಮ ಅರಣ್ಯ ಜಾಗವನ್ನು ತೆಗೆದುಕೊಳ್ಳಿ. ಬೇರೆ ಜಾಗವನ್ನು ಒತ್ತುವರಿ ಮಾಡಬೇಡಿ. ಕಂದಾಯ ಇಲಾಖೆಗೆ ಸೇರಿದ ಜಾಗವನ್ನು ಬಿಟ್ಟುಕೊಡಬೇಕು.

ಅಧ್ಯಕ್ಷರು: ಅರಣ್ಯ ಇಲಾಖೆಗೆ ಒಳಪಟ್ಟ ಜಾಗಗಳು, ಈ ವಿಚಾರವು ಬಹಳ ಗಂಭೀರವಾಗಿರುವುದರಿಂದ 7ನೇ ತಾರೀಖು ಅರ್ಧಗಂಟೆ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ವಸಂತ ಬಂಗೇರ: ಆಯಿತು.

ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಪರಿಷ್ಕರಿಸಿದ್ದಾರೆ.

ಏತ ನೀರಾವರಿ ಕಾಮಗಾರಿ

10 (125) ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ):– ಜಲ ಸಂಪನ್ಮೂಲ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ತುರುವೇಕೆರೆ ತಾಲ್ಲೂಕು ದಬ್ಬೇಘಟ್ಟ ಅಮ್ಮಸಂದ್ರ ಕಣತೂರು ಮತ್ತು ಮುದ್ದಹಳ್ಳಿ ಗ್ರಾಮಗಳ ಏತ ನೀರಾವರಿ ಕಾಮಗಾರಿ ಮಂಜೂರಾತಿಯಾಗಿದೆಯೇ;

ಆ) ಹಾಗಿದ್ದಲ್ಲಿ, ಈ ಕಾಮಗಾರಿಗಾಗಿ ಪ್ರಸಕ್ತ ವರ್ಷ ಮಂಜೂರಾದ ಹಣವೆಷ್ಟು; (ಮಾಹಿತಿ ಒದಗಿಸುವುದು)

ಇ) ಏತ ನೀರಾವರಿ ಕಾಮಗಾರಿ ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಕಾರಣಗಳೇನು ; (ಮಾಹಿತಿ ನೀಡುವುದು)

ಈ) ತುರುವೇಕೆರೆ ತಾಲ್ಲೂಕು ದಂಡಿನಶಿವರ ರಂಗಮಂದಿರವು ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಈ ಕಾಮಗಾರಿಯನ್ನು ಕೈಗೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು):–

ಅ) ತುರುವೇಕೆರೆ ತಾಲ್ಲೂಕು, ದಬ್ಬೇಘಟ್ಟ ಅಮ್ಮಸಂದ್ರ, ಕಣತೂರು ಮತ್ತು ಮುದ್ದಹಳ್ಳಿ ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ಈ ಕೆಳಕಂಡ ಏತ ನೀರಾವರಿ ಕಾಮಗಾರಿಗಳಿಗಾಗಿ ಸರ್ವೆ ಕಾರ್ಯ ನಡೆಸಿ ಅಂದಾಜು ಪಟ್ಟಿಯನ್ನು 2006ನೇ ಸಾಲಿನಲ್ಲಿ ತಯಾರಿಸಲಾಗಿತ್ತು.

1. ನಾಗಮಂಗಲ ಶಾಖಾ ನಾಲೆಯ ಸರಪಳಿ 43150 ಮೀ ನಿಂದ ನೀರನ್ನು ಎತ್ತಿ ತುರುವೇಕೆರೆ ತಾಲ್ಲೂಕು ದಬ್ಬೇಘಟ್ಟ ಹೋಬಳಿ ಬೆನಕನಕೆರೆ, ಬೀಗೇನಹಳ್ಳಿ, ದಬ್ಬೇಘಟ್ಟ, ಅರೆಮಾರನಹಳ್ಳಿ ಹಾಗೂ ಇತರೆ ಗ್ರಾಮಗಳಿಗೆ (ಒಟ್ಟು 14 ಗ್ರಾಮಗಳು) ಕುಡಿಯುವ ನೀರು ಯೋಜನೆ – ರೂ. 305.00 ಲಕ್ಷ.

2. ನಾಗಮಂಗಲ ಶಾಖಾ ನಾಲೆಯ ಸರಪಳಿ 28850 ಮೀ ನಿಂದ ನೀರನ್ನು ಎತ್ತಿ ತುರುವೇಕೆರೆ ತಾಲ್ಲೂಕು ಕಣತ್ತೂರು, ಹುಲಿಕಲ್ಲು, ಬ್ರಹ್ಮದೇವರಹಳ್ಳಿ, ಮಾವಿನಹಳ್ಳಿ ಹಭಕನಹಳ್ಳಿ, ಹಾಗೂ ಬೇವಿನ ಹಳ್ಳಿ (ಒಟ್ಟು 6 ಗ್ರಾಮಗಳು) ಗ್ರಾಮಗಳಿಗೆ ಕುಡಿಯುವ ನೀರು ಯೋಜನೆ – ರೂ. 270.00 ಲಕ್ಷ.

ಉಳಿದಂತೆ, ಅಮ್ಮಸಂದ್ರ ಹಾಗೂ ಮುದ್ದಹಳ್ಳಿ ಏತ ನೀರಾವರಿ ಕಾಮಗಾರಿಗಳಿಗಾಗಿ ಯಾವುದೇ ಸರ್ವೆ ಕಾರ್ಯ ಕೈಗೊಂಡಿರುವುದಿಲ್ಲ.

ಮೇಲಿನ ಯೋಜನೆಗಳು ಕುಡಿಯುವ ನೀರಿನ ಯೋಜನೆಗಳಾಗಿರುವುದರಿಂದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯನ್ನು ದಿನಾಂಕ: 11–12–2006 ರಂದು ಈಗಾಗಲೇ ಕೋರಲಾಗಿರುತ್ತದೆ. ಮುಂದಿನ ಕ್ರಮವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕೈಗೊಳ್ಳಬೇಕಾಗಿರುತ್ತದೆ.

ಆ) ಉದ್ಭವಿಸುವುದಿಲ್ಲ.

ಇ) ದಬ್ಬೇಘಟ್ಟ ಹಾಗೂ ಕಣತುರು ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ಪ್ರಸ್ತಾವನೆಗಳ ಬಗ್ಗೆ ದಿನಾಂಕ: 08–11–2006 ರಂದು ನಡೆದ ಕಾವೇರಿ ನೀರಾವರಿ ನಿಗಮದ ಮಂಡಳಿಯ 15ನೇ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿದ್ದು, ನಂತರ ಇವು

ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳಾಗಿರುವುದರಿಂದ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮುಖಾಂತರ ತೆಗೆದುಕೊಳುವುದರಿಂದ ಕೇಂದ್ರ ಸರ್ಕಾರದ ಅನುದಾನವೂ ಲಭ್ಯವಾಗುತ್ತದೆ, ಆ ಕಾರಣ ಈ ಯೋಜನೆಗಳನ್ನು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಹಸ್ತಾಂತರಿಸುವುದು ಸೂಕ್ತವೆಂದು ತೀರ್ಮಾನಿಸಿ ಮಂಡಳಿ ಸಭೆಯಲ್ಲಿ ನಿರ್ಣಯಿಸಲಾಗಿರುತ್ತದೆ. ಸದರಿ ಯೋಜನೆಗಳು ಕುಡಿಯುವ ನೀರಿನ ಯೋಜನೆಗಳಾಗಿರುವುದರಿಂದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯನ್ನು ದಿನಾಂಕ: 11–12–2006 ರಂದು ಈಗಾಗಲೇ ಕೋರಲಾಗಿರುತ್ತದೆ. ಮುಂದಿನ ಕ್ರಮವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕೈಗೊಳ್ಳಬೇಕಾಗಿರುತ್ತದೆ.

ಈ) ತುರುವೇಕೆರೆ ತಾಲ್ಲೂಕು ದಂಡಿನಶಿವರ ರಂಗಮಂದಿರವು ಜಲ ಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿ ಇರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಶ್ರೀ ಎಂ.ಟಿ. ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಈ ಉತ್ತರದಿಂದ ನಮ್ಮ ರೈತರ್ಯಾರೂ ನೀರು ಕುಡಿಯುವುದಕ್ಕಾಗುವುದಿಲ್ಲ. ಈ ಸ್ಕೀಮ್ ಪ್ರಾರಂಭವಾಗಿರುವುದು ಸುಮಾರು 2006ರಲ್ಲಿ. ಈ ಬಗ್ಗೆ estimate ಮಾಡಿ plan ಮಾಡಿ 2006ರಿಂದ ಆ ರೀತಿಯಾಗಿ RDPRಗೆ ಕೊಟ್ಟಿದ್ದೇವೆಂದು ಹೇಳುತ್ತಾರೆ. ಈಗಾಗಲೇ 5 ವರ್ಷಗಳು ಕಳೆದಿದೆ, ಅಲ್ಲಿ ಯಾವ ಕಾರ್ಯಕ್ರಮವನ್ನು ಮಾಡಿರುವುದಿಲ್ಲ. ಅಲ್ಲಿ ಒಂದು ಟೆಂಡರ್‌ನ್ನೂ ಸಹ ಕರೆದಿರುವುದಿಲ್ಲ ಅಲ್ಲಿ ನೀರೂ ಸಹ ಇಲ್ಲ. ಅಲ್ಲಿ ಹೇಮಾವತಿ canal ಬರುವುದರಿಂದ ಸುಮಾರು 80 ರಿಂದ 120 ಆಳದಲ್ಲಿ ಹೋಗುತ್ತಿದೆ. ಅಲ್ಲಿ ಕುಡಿಯುವ ನೀರಿಗೂ ಸಹ ಕಷ್ಟವಾಗಿದೆ. ಈಗಾಗಲೇ 10 ರಿಂದ 15 ವರ್ಷವಾಯಿತು. ಆ ಭಾಗದ ಯಾವುದೇ ಕೆರೆಯೂ ತುಂಬಿರುವುದಿಲ್ಲ. ಕುಡಿಯುವ ನೀರಿಗೂ ಕಷ್ಟವಾಗಿದೆ. ದನಕರುಗಳಿಗೂ ತುಂಬಾ ಕಷ್ಟವಾಗಿದೆ. ಜಲ ಸಂಪನ್ಮೂಲ ಸಚಿವರು ದಯಮಾಡಿ ಇದರ ಬಗ್ಗೆ ದೊಡ್ಡ ಮನಸ್ಸು ಮಾಡಿ ಏತ ನೀರಾವರಿಯನ್ನು ಸ್ಯಾಂಕ್ಷನ್ ಮಾಡುವ ಮುಖಾಂತರ ಆ ಭಾಗದ ಕೆರೆ ಮತ್ತು ಕುಡಿಯುವ ನೀರಿಗಾಗಿ ಮತ್ತು ಸುಮಾರು 20 ಮತ್ತು 25 ಗ್ರಾಮಕ್ಕೆ ಕುಡಿಯುವ ನೀರಿಗೆ ಅನುಕೂಲವಾಗುತ್ತದೆ. 1200–1300 ಅಡಿ ಅಲ್ಲಿ ಬೋರ್ ಹಾಕಿದರೂ ಸಹ ನೀರು ಬರುತ್ತಿಲ್ಲ. ಅಲ್ಲಿ ಅಂತಹ ಸಂಕಷ್ಟದಲ್ಲಿದ್ದಾರೆ. ದಯಮಾಡಿ ಸನ್ಮಾನ್ಯ ಸಚಿವರು

ಇದರ ಬಗ್ಗೆ ಉದಾರವಾಗಿ ಚಿಂತನೆಯನ್ನು ಮಾಡಿ ಏತ ನೀರಾವರಿಯನ್ನು ಮಂಜೂರು ಮಾಡಿಕೊಡಬೇಕೆಂದು ಕೇಳುತ್ತೇನೆ. ಆ ಭಾಗದ ರೈತರ ಹಿತ ದೃಷ್ಟಿಯಿಂದ, ಕೊನೆಯ ಪಕ್ಷದ ಆ ಭಾಗದ ಜನರು ಕುಡಿಯುವ ನೀರನ್ನಾದರೂ ಕುಡಿಯಲಿ ಎಂದು ದಯಮಾಡಿ ಅದನ್ನು ಮಂಜೂರು ಮಾಡಿಕೊಡಬೇಕೆಂದು ನಿಮ್ಮ ಮುಖಾಂತರ ವಿನಂತಿಯನ್ನು ಮಾಡುತ್ತಿದ್ದೇವೆ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಸಭಾಧ್ಯಕ್ಷರೆ, ಉತ್ತರದಲ್ಲಿ ಈ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇನೆ. ತುರುವೇಕೆರೆ ತಾಲ್ಲೂಕು ದಬ್ಬೇಘಟ್ಟ ಅಮ್ಮಸಂದ್ರ, ಕಣತೂರು ಮತ್ತು ಮುದ್ದಹಳ್ಳಿ ಈ 4 ಹಳ್ಳಿಗಳಿಗೆ ಏತ ನೀರಾವರಿಗೆ ಅದರ ಮುಖಾಂತರ ಕೆಳಗೆ ಬರುವಂತಹ ಸುಮಾರು 14 ಕೆರೆಗಳು ದಬ್ಬೇಘಟ್ಟದಲ್ಲಿ, 6 ಕೆರೆಗಳು ಕಣತೂರಿನಲ್ಲಿ ಬರುವಂತಹ ಕೆರೆಗಳನ್ನು ತುಂಬಿಸುವುದಕ್ಕೆ 2006ರಲ್ಲಿ ಯೋಜನೆಯನ್ನು ಮಾಡಿತ್ತು. ಯೋಜನೆಯನ್ನು ಮಾಡಿದಂತಹ ಸಂದರ್ಭದಲ್ಲಿ ಕುಡಿಯುವ ನೀರಿನ ಯೋಜನೆ ಇರುವುದರಿಂದ ಪಂಚಾಯತ್ ರಾಜ್ ಇಲಾಖೆಯವರು ಮಾಡಬೇಕು, ಅದಕ್ಕೆ ಕೇಂದ್ರ ಸರ್ಕಾರದಿಂದಲೂ ಸಹ ಹಣವು ಬರುತ್ತದೆ ಎನ್ನುವಂತಹ ನಿರ್ಣಯವನ್ನು 2006ರಲ್ಲಿ ತೆಗೆದುಕೊಂಡಿತ್ತು. ಇವತ್ತು ಆ ಭಾಗದ ಶಾಸಕರು ಹಲವಾರು ಬಾರಿ ಈ ಬಗ್ಗೆ ಒತ್ತಾಯವನ್ನು ಮಾಡಿದ್ದಾರೆ. ಆ ಭಾಗದ ರೈತರು ಕೂಡ ನನಗೆ ಬಂದು ಮನವರಿಕೆಯನ್ನು ಮಾಡಿಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಅಲ್ಲಿ ಕುಡಿಯುವ ನೀರು ಮತ್ತು ವಿಶೇಷವಾಗಿ ಅಲ್ಲಿ ಸುಮಾರು 1500 ಅಡಿಗೆ ಬೋರ್‌ವೆಲ್ ಹೋಗುತ್ತಿದೆ. ಅಲ್ಲಿ ಅಂತರ್ಜಲವು ಬಹಳ ಕುಸಿದಿರುವ ಕಾರಣದಿಂದ ಇದಕ್ಕೆ ಬೇಕಾಗಿರುವಂತಹ ನೀರಿನ ಪ್ರಮಾಣವು ಬಹಳ ದೊಡ್ಡ ಪ್ರಮಾಣದಲ್ಲಿ ಇಲ್ಲ. 2006ರಲ್ಲಿ ತೆಗೆದುಕೊಂಡಂತಹ ನಿರ್ಣಯಕ್ಕೆ ಇವತ್ತು ಸ್ವಲ್ಪ ಬದಲಾವಣೆಯನ್ನು ಮಾಡಿ ಎರಡು ಯೋಜನೆಗಳ ಬಗ್ಗೆ ನಾವು ಸರ್ವೇ ಮಾಡಿದ್ದೇವೆ. ದಬ್ಬೇಘಟ್ಟದಲ್ಲಿ 14 ಕೆರೆಗಳನ್ನು ತುಂಬಿಸುವಂತಹದ್ದು ಕಣತೂರಿನಲ್ಲಿ 6 ಕೆರೆಗಳನ್ನು ತುಂಬಿಸುವಂತಹದ್ದು ಮೊದಲನೆಯ ಹಂತವಾಗಿ ಈ ಯೋಜನೆಗಳನ್ನು ನಾವು ತೆಗೆದುಕೊಳ್ಳುತ್ತೇವೆನ್ನುವಂತಹ ಆಶ್ವಾಸನೆಯನ್ನು ಸನ್ಮಾನ್ಯ ಶಾಸಕರಿಗೆ ಕೊಡುತ್ತೇನೆ.

ಶ್ರೀ ಎಂ.ಟಿ. ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ದಯಮಾಡಿ ಯಾವಾಗ ಚಾಲನೆ ಮಾಡುತ್ತೀರೆಂದು ಹೇಳಬೇಕು. ಈಗಾಗಲೇ ಬಹಳ ಜನರು ಸಂಕಷ್ಟದಲ್ಲಿದ್ದು ಸಫರ್ ಪಟ್ಟಿದ್ದಾರೆ. ನಿಮ್ಮ ಕಾಲದಲ್ಲಿ ಅದು ಮಂಜೂರಾದರೆ ನಮ್ಮ ಜನರಿಗೆ ಕುಡಿಯುವ ನೀರಿಗೆ

ಅನುಕೂಲವಾಗುತ್ತದೆ. ಇದರ ಬಗ್ಗೆ ಬಹಳ ಚರ್ಚೆಯಾಗಿದೆ. ನೀವೇನೋ ದೊಡ್ಡ ಮನಸ್ಸನ್ನು ಮಾಡುತ್ತಿದ್ದೀರಿ. ಅದನ್ನು ಯಾವಾಗ ತೆಗೆದುಕೊಳ್ಳುತ್ತೀರೆಂದು ದಯಮಾಡಿ ಹೇಳಿದರೆ ಅನುಕೂಲವಾಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ: ನಿಮ್ಮ ಮನವಿಯನ್ನು ಮನ್ನಿಸಿ ಈಗಾಗಲೇ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ, ಈ ಎರಡು ಸರ್ವೆ ಕಾರ್ಯ ಏನು ಆಗಿದೆ, ಇವುಗಳ ಬಗ್ಗೆ ಮುಂದಿನ ಒಂದು ತಿಂಗಳಲ್ಲಿ ಬೇಕಾಗಿರುವಂತಹ ಆಡಳಿತಾತ್ಮಕ ಅನುಮೋದನೆಯನ್ನು ಪಡೆದು ನಾವು ಮುಂದಿನ ಕಾಮಗಾರಿಯ ಬಗ್ಗೆ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಎಂ.ಟಿ. ಕೃಷ್ಣಪ್ಪ: ಧನ್ಯವಾದಗಳು, ಇದು ಬಹಳ ವರ್ಷದಿಂದ ನೆನೆಗುದಿಗೆ ಬಿದ್ದಂತಹ ವಿಷಯವಾಗಿದೆ. ಸುಮಾರು ಸರ್ಕಾರಗಳು ಬಂದು ಹೋದರೂ ಇದು ಆಗಲಿಲ್ಲ. ಕೊನೆಗೆ ನಮ್ಮ ಸನ್ಮಾನ್ಯ ಸಚಿವರು ನಮ್ಮ ರೈತರ ಹಿತದೃಷ್ಟಿಯಿಮದ ಕುಡಿಯುವ ನೀರಿಗೆ ಮತ್ತು ಏತ ನೀರಾವರಿಗೆ ಮಂಜೂರು ಮಾಡಿಕೊಡುತ್ತೇವೆಂದು ಸದನದಲ್ಲಿ ತಮ್ಮ ಮುಖಾಂತರ assurance ಕೊಟ್ಟಿದ್ದಾರೆ. ನಿಜವಾಗಿಯೂ ಈ ಬಗ್ಗೆ ನನ್ನ ಕ್ಷೇತ್ರದ ಜನತೆಯ ಪರವಾಗಿ ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಶ್ರೀ ಪಿ.ಎಸ್. ಪುಟ್ಟೇಗೌಡ: ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ತುಮಕೂರಿಗೆ ಮತ್ತು ಮಂಡ್ಯಕ್ಕೆ ನೀರನ್ನು ಹೇಮಾವತಿ ಜಲಾಶಯದಿಂದ ಕೊಡುತ್ತಿದ್ದಾರೆ. ಚನ್ನರಾಯಪಟ್ಟಣದ ಬಾಗೂರುನವಿಲೆ ಭಾಗದವರು ಅದರ ನೋವನ್ನು ಬಹಳ ಅನುಭವಿಸಿದ್ದಾರೆ. ಮಾಜಿ ಮುಖ್ಯಮಂತ್ರಿಗಳಿಗೆ ಹಾಲಿ ಮುಖ್ಯಮಂತ್ರಿಗಳಿಗೆ ಗೊತ್ತೋ ಇಲ್ಲವೋ? ಈ ಭಾಗದ ಜಲಾಶಯದ ಬಗ್ಗೆ ಮಾಜಿ ಮುಖ್ಯಮಂತ್ರಿಯಾದ ಶ್ರೀ ಜೆ.ಹೆಚ್. ಪಟೇಲ್‌ರವರ ಕಾಲದಲ್ಲಿ ದೊಡ್ಡ ಗಲಾಟೆಯೂ ಕೂಡ ಆಯಿತು. ಬಾಗೂರುನವಿಲೆಯಲ್ಲಿ ಸುಮಾರು 12 ಕಿ.ಮೀ. ಸುರಂಗವನ್ನು ತೆಗೆದು ಹೃದಯಾಳದ ರಕ್ತನಾಳದಲ್ಲಿ ಮತ್ತೆ ಅವರಿಗೆ ಇನ್ನೊಂದು ಸಾರಿ ಮಂಡ್ಯ ಮತ್ತು ತುಮಕೂರಿನವರಿಗೆ ನೀರು ಕೊಟ್ಟಂತೆ ಆಯಿತು. ಅವರಿಗೆ ಅನುಕೂಲವು ಸಹ ಆಯಿತು. ಈ ಬಗ್ಗೆ ನಮಗೆ ಸಂತೋಷವಾಗಿದೆ. ಆ ಭಾಗದಲ್ಲಿ ಇವತ್ತು ನುಗ್ಗೇಹಳ್ಳಿ ಕೆರೆ ಮತ್ತು ಹಿರಿಸಾವೆ ಕೆರೆಯ ಬಗ್ಗೆ Irrigation Ministerರವರಿಗೆ ಅಲ್ಲಿಯ ಸಮಸ್ಯೆಯ ಬಗ್ಗೆ ಗೊತ್ತಿದೆ. ಅಲ್ಲಿ ಕುಡಿಯುವ ನೀರಿಗಾಗಿ ಎರಡು Lift Irrigation ಹಿರಿಸಾವೆ ಮತ್ತು ನುಗ್ಗೇಹಳ್ಳಿಗೆ ಕೆರೆಗೆ ನೀರು ತುಂಬಿಸುವಂತಹ ಕೆಲಸವನ್ನು ಮಾಡುವುದಕ್ಕೆ ತಾವು ಕೈಹಾಕಿದ್ದೀರೆಂದು ನಮಗೆ ಈಗ ಗೊತ್ತಾಗಿದೆ. ದಯಮಾಡಿ ಈ ಬಗ್ಗೆ ಬೇಗ ಅದು ಕಾರ್ಯಗತವಾಗಬೇಕು. ಈ ಬಗ್ಗೆ ಜನರು ಬಾಯಲ್ಲಿ ಹೇಳಿದರೆ ಸಮಾಧಾನ ಪಡುವುದಿಲ್ಲ. ಈಗ ರಾಜಕೀಯದವರು ಮಾಮೂಲಿ ಹೇಳುತ್ತಿರುತ್ತಾರೆಂದು ಅವರು ನಮ್ಮ ಮಾತಿನಲ್ಲಿ

ಭರವಸೆಯನ್ನು ಇಡುವುದಿಲ್ಲ. ಇದನ್ನು ಕಾರ್ಯಗತ ಮಾಡಿಕೊಡಬೇಕೆಂದು ಹೇಳಿ ದಯಮಾಡಿ ಮಾನ್ಯ ನೀರಾವರಿ ಸಚಿವರಲ್ಲಿ ಮತ್ತು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿಯನ್ನು ಮಾಡುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ: ಹಿರಿಯ ಶಾಸಕರಾದಂತಹ ಮಾನ್ಯ ಪುಟ್ಟೇಗೌಡರಿಗೆ ಈ ಬಗ್ಗೆ ಚೆನ್ನಾಗಿ ಗೊತ್ತಿದೆ. ನಾವು ನುಗ್ಗೇಹಳ್ಳಿ ಕೆರೆ ಮತ್ತು ಹಿರಿಸಾವೆ ಕೆರೆಯ ಬಗ್ಗೆ ನೀರು ಕೊಡುವ ಬಗ್ಗೆ ಏನೆಲ್ಲಾ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆಂದು ಅವರಿಗೆ ಚೆನ್ನಾಗಿ ಗೊತ್ತಿದೆ. ಈಗಾಗಲೇ Board approve ಕೂಡ ಆಗಿದೆ. TAC approve ಆಗಿದೆ. ಅದು ಕ್ಯಾಬಿನೆಟ್‌ನ ಮುಂದೆ ಬರುತ್ತಿದೆ. ಅದರ ಬಗ್ಗೆ ಆಡಳಿತಾತ್ಮಕ ಮಂಜೂರಾತಿ ಆದ ತಕ್ಷಣ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭ ಮಾಡುತ್ತಿದ್ದೇವೆ. ಅದರ ಜೊತೆಗೆ ಆ ಭಾಗದಲ್ಲಿ ಬೇಲೂರಿನ ಹಿರೇಮಾದಹಳ್ಳಿ ಯೋಜನೆಯೂ ಕೂಡ ನಾವು ತೆಗೆದುಕೊಂಡಿರುವುದು ತಮಗೆ ಗೊತ್ತಿದೆ. ನಿಮ್ಮ ಜಿಲ್ಲೆಯ ಯೋಜನೆಗಳನ್ನು ಕೂಡ ನಾವು ರೂಪಿಸಿದ್ದೇವೆ. ನೆನೆಗುದ್ದಿಗೆ ಬಿದ್ದಿರುವಂತಹ ಯೋಜನೆಗಳಿಗೂ ಕೂಡ ಕಾಯಕಲ್ಪವನ್ನು ಸಹ ಕೊಟ್ಟಿದ್ದೇವೆ. ಅದೇ ರೀತಿಯಾಗಿ ಆ ಕಡೆ ಬರಗಾಲ ಜಾಸ್ತಿ ಇರುವುದರಿಂದ, ಕೆರೆಯನ್ನು ತುಂಬಿಸುವುದಕ್ಕೆ ಬಹಳಷ್ಟು ಒತ್ತಾಯವು ಆ ಭಾಗದ ರೈತರಿಂದ ಬಂದಿರುವುದರಿಂದ, ಅದಕ್ಕೆ ಸ್ಪಂದಿಸಿ ಕೆಲಸವನ್ನು ಮಾಡುತ್ತಿದ್ದೇವೆ. ಹೇಮಾವತಿಯ ಜಲಾಶಯದಲ್ಲಿ ತಮ್ಮ ನೀರಿನ ಹಕ್ಕಿಗೆ ಯಾವುದೇ ರೀತಿಯಾದ ತೊಂದರೆಯಾಗದಂತೆ ನಾವು ಕೆಲಸವನ್ನು ಮಾಡುತ್ತೇವೆ.

ಶ್ರೀ ಬಿ.ಬಿ. ರಾಮಸ್ವಾಮಿ ಗೌಡ: ಅಧ್ಯಕ್ಷರೇ, ಇದು ಬಹಳ ವಿರುದ್ಧವಾಗಿದೆ, ಇದರಿಂದ ನಮಗೆಲ್ಲಾ ಬೇಸರವಾಗಿದೆ, ಮಾನ್ಯ ನೀರಾವರಿ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ಈ ಗೊರೂರು ಅಣೆಕಟ್ಟು ಸುಮಾರು 30 ವರ್ಷಗಳ ಹಿಂದೆ ಪ್ರಾರಂಭವಾಯಿತು. ಕಾವೇರಿ ಟ್ರಿಬ್ಯುನಲ್ ಕೂಡ ಈ ಮಧ್ಯೆ ಇದೆ. ಇದರ ಸದುಪಯೋಗವನ್ನು ಪಡೆದುಕೊಂಡು ಮೂಲ ನಕ್ಷೆ ಮತ್ತು ಮೂಲ ಗುರಿ ಎನಿತ್ತೋ, ಅದನ್ನೆಲ್ಲಾ ತಿರುಚಿ ಕುಡಿಯುವ ನೀರಿನ ನೆಪದಲ್ಲಿ ನಮ್ಮ ತಾಲ್ಲೂಕಿಗೆ ಬಹಳ ಅನ್ಯಾಯ ಮಾಡುತ್ತಿದ್ದೀರಿ. 30 ವರ್ಷಗಳಿಂದ ನಮ್ಮ ತಾಲ್ಲೂಕಿಗೆ ನೀರು ಬರುತ್ತಿಲ್ಲ. ಈ ಕಾವೇರಿ ಟ್ರಿಬ್ಯುನಲ್ ಎಂಬ ಭೂತವನ್ನು ಎದುರಿಗೆ ಕೂರಿಸಿದ್ದೀರಿ, ಕುಡಿಯುವ ನೀರು ಕೊಡಿ ನಾವು ಬೇಡವೆನ್ನುವುದಿಲ್ಲ. ಕುಡಿಯುವ ನೀರಿನ ನೆಪದಲ್ಲಿ ನಮ್ಮ ತಾಲ್ಲೂಕಿಗೆ ನೀರು ಬರದಂತೆ ಅನ್ಯಾಯ ಮಾಡುತ್ತಿದ್ದೀರಿ. ಈ ವರ್ಷ ಇನ್ನೂ ಕೂಡ ನಮ್ಮ ಕೆರೆಗಳಿಗೆ ನೀರು ತುಂಬಿಲ್ಲ. ಇನ್ನೂ ಖಾಲಿ ಇವೆ. ಇದರ ಬಗ್ಗೆ ಇಲಾಖಾಧಿಕಾರಿಗಳಿಂದ ಮಾಹಿತಿ ಪಡೆದುಕೊಳ್ಳಿ. ಇವತ್ತು 50 ಕ್ಯೂಸೆಕ್ಸ್ ನೀರು ಸಹ ನಮ್ಮ ಕೆರೆಗಳಿಗೆ ಬರುತ್ತಿಲ್ಲ. ನಿಮ್ಮ ಮಾಹಿತಿ ಪ್ರಕಾರ 8–9 ತಿಂಗಳುಗಳಲ್ಲಿ ನೀರು ಹರಿಸುತ್ತೇವೆಂದು ಹೇಳುತ್ತೀರಿ. ನಮ್ಮ ತಾಲ್ಲೂಕಿಗೆ ನೀರು ಬರದೆ ಬಹಳ ಅನ್ಯಾಯವಾಗುತ್ತಿದೆ.

ಶ್ರಿ ಬಸವರಾಜ ಬೊಮ್ಮಾಯಿ: ಶ್ರೀ ರಾಮಸ್ವಾಮಿ ಗೌಡರು ಅವರ ತಾಲ್ಲೂಕಿನ ವಿಚಾರವನ್ನೇನು ಹೇಳಿದ್ದಾರೆ, 245 ಕಿ.ಮೀ. ವ್ಯಾಪ್ತಿಯಲ್ಲಿ ಬರುವಂಥ ಅವರ ತಾಲ್ಲೂಕಿನ ಬಗ್ಗೆ ಚರ್ಚೆ ಮಾಡಲಿಕ್ಕೆ ಇದೇ ವಾರದಲ್ಲಿ ಅಧಿಕಾರಿಗಳ ಸಭೆಯನ್ನು ಕರೆದಿದ್ದೇನೆ. ಆ ಭಾಗದ ಕೆರೆಗಳನ್ನು ತುಂಬಿಸುವುದಕ್ಕೆ ಮತ್ತು ಎಲ್ಲಿಯವರೆಗೆ ಮುಖ್ಯ ಕಾಲುವೆ ಮತ್ತು distrivutary ಮಾಡಬೇಕೆನ್ನುವುದಕ್ಕೆ ಒಂದು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ. ಯಾವುದೇ ಕಾರಣಕ್ಕೂ ಕೂಡ ಕುಣಿಗಲ್ ಕೆರೆಗೆ ಯಾವುದೇ ರೀತಿಯ ತೊಂದರೆಯಾಗದಂತೆ ಯೋಜನೆಗಳನ್ನು ರೂಪಿಸುತ್ತೇವೆ.

ಕೃಷ್ಣ ಮೇಲ್ದಂಡೆ ಯೋಜನೆಯ ಕಾಮಗಾರಿಗಳು

14 (195) ಡಾ॥ ಬಗಲಿ ಸಾರ್ವಭೌಮ ಸಾತಗೌಡ (ಇಂಡಿ):– ಜಲ ಸಂಪನ್ಮೂಲ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಇಂಡಿ ಕ್ಷೇತ್ರದ ಶಿರಶ್ಯಾಡ ಗ್ರಾಮದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಲುವೆಗಳಿಂದ ತಪ್ಪಿ ಹರಿದು (Escape Water) ಬರುವ ನೀರಿನಿಂದ ಗ್ರಾಮ ಜಲಾವೃತವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದಕ್ಕಾಗಿ ಅಲ್ಲಿ (Culvert) ನಿರ್ಮಿಸುವ ಯೋಜನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಆ ಕಾಮಗಾರಿ ಈಗ ಯಾವ ಹಂತದಲ್ಲಿದೆ ಮತ್ತು ಅಲ್ಲಿ ಕಾಮಗಾರಿಯನ್ನು ಎಂದು ಪ್ರಾರಂಭಿಸಲಾಗುವುದು?

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು):–

ಅ) ಇಂಡಿ ಕ್ಷೇತ್ರದ ಶಿರಶ್ಯಾಡ ಗ್ರಾಮದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಲುವೆಗಳಿಂದ ಹರಿದು (Escape Water) ಬರುವ ನೀರಿನಿಂದ ರಸ್ತೆಯ ಮೇಲೆ ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ಸದರಿ ವಿಷಯವು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಇದಕ್ಕಾಗಿ ಶಿರಶ್ಯಾಡ – ಮಸಳಿ ರಸ್ತೆ ಸೇತುವೆ ನಿರ್ಮಾಣದ ಕಾಮಗಾರಿಗೆ ನಿಗಮದಡಿ ಈಗಾಗಲೇ ರೂ. 346.00 ಲಕ್ಷಗಳ ಅಂದಾಜು ಪತ್ರಿಕೆಯನ್ನು ತಯಾರಿಸಿದ್ದು, ಕೂಡಲೇ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಿ, ಶೀಘ್ರದಲ್ಲೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತದೆ.

ಡಾ॥ ಬಗಲಿ ಸಾರ್ವಭೌಮ ಸಾತಗೌಡ: ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ ಆದರೆ ಈ ಕಾಮಗಾರಿಗೆ 2010 ರಲ್ಲಿಯೇ ಟೆಂಡರ್ ಕರೆಯಲಾಗಿತ್ತು. ನಂತರ ಆ ಟೆಂಡರನ್ನು ಹಿಂದಕ್ಕೆ ಪಡೆಯಲಾಯಿತು. ಆಮೇಲೆ ಅದನ್ನು ಟಿಎಸಿಗೆ ಕಳುಹಿಸಲಾಯಿತು. ಟಿಎಸಿಯವರು ಒಂದು ಅನಾವಶ್ಯಕ objection create